ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

**ZILLA PANCHAYAT OFFICE, BELGAUM-590002**

ದೂರವಾಣಿ / Telephone: 0831-2407201, 0831-2407206, 0831-2431640

ಫ್ಯಾಕ್ಸ್/Fax: 0831-2429662

e-mail: ceozpbelgaum@yahoo.com, dsdevbgm@gmail.com

ವಿಷಯ: 2014-15ನೇ ಸಾಲಿನಲ್ಲಿ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯ ಸದಸ್ಯರುಗಳಿಗೆ ಮೂರು ದಿವಸಗಳ ತರಬೇತಿ ಕಾರ್ಯಕ್ರಮಹಮ್ಮಿಕೊಳ್ಳುವ ಬಗ್ಗೆ.

ಓದಲಾದ: ನಿರ್ದೇಶಕರು, ಅಬ್ದುಲ್ ನಜೀರಸಾಬ, ರಾಜ್ಯ ಗ್ರಾಮೀಣ ಅಭಿವೃದ್ಧಿಸಂಸ್ಥೆ, ಮೈಸೂರು ಇವರ ಪತ್ರಸಂ:ಎಸ್.ಆಯ್.ಆರ್.ಡಿ/ಗ್ರಾಸಸೇ/ಕುನೀಯೋ/ತ/119/2014-15, ದಿನಾಂಕ:27-12-2014.

## ಪ್ರಸ್ತಾವನೆ:

2014-15ನೇ ಸಾಲಿನಲ್ಲಿ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯ ಸದಸ್ಯರುಗಳಿಗೆ ಮೂರು ದಿವಸಗಳ ತರಬೇತಿಯನ್ನು ದಿನಾಂಕ:6-1-2015 ರಿಂದ 8-1-2015, 12-1-2015 ರಿಂದ 14-1-2015, 20-1-2015 ರಿಂದ 22-1-2015, 28-1-2015 ರಿಂದ 30-1-2015 ರವರೆಗೆ, 4-2-2015 ರಿಂದ 6-2-2015, 10-2-2015 ರಿಂದ 12-2-2015, 16-2-2015 ರಿಂದ 18-2-2015, 19-2-2015 ರಿಂದ 21-2-2015, 25-2-2015 ರಿಂದ 27-2-2015 ರವರಗೆ, ಹಾಗೂ4-3-2015 ರಿಂದ 6-3-2015 ರವರೆಗೆ 104 ತಂಡಗಳಲ್ಲಿ ಒಟ್ಟು 4365 ಸದಸ್ಯರುಗಳಿಗೆ ತರಬೇತಿಯನ್ನು ತಾಲೂಕ ಪಂಚಾಯತ ಸಾಮರ್ಥ್ಯಸೌಧದಲ್ಲಿ ಜರುಗಿಸಲಾಗುತ್ತಿದೆ.

ನಿರ್ದೇಶಕರು, ಅಬ್ದುಲ್ ನಜೀರಸಾಬ್, ರಾಜ್ಯ ಗ್ರಾಮೀಣ ಅಭಿವೃದ್ಧಿಸಂಸ್ಥೆ, ಮೈಸೂರು ಇವರು 104 ತಂಡಗಳಿಗೆ ಒಟ್ಟು 4365 ಸದಸ್ಯರುಗಳ ತರಬೇತಿ ಕಾರ್ಯಕ್ರಮಕ್ಕೆರೂ.39,03,475/- ಅನುದಾನ ನಿಗದಿಪಡಿಸಿರುತ್ತಾರೆ. ಇದರಲ್ಲಿ ಪ್ರಸ್ತುತ ಜಿಲ್ಲಾ ಪಂಚಾಯತ ಬೆಳಗಾವಿಗೆ ಶೇ 80 ರಷ್ಟುಅನುದಾನ ರೂ.31,22,780/-ಗಳನ್ನುಬಿಡುಗಡೆ ಮಾಡಿರುತ್ತಾರೆ. ಸದರಿತರಬೇತಿಗೆ ಮಾಡಲಾಗುವ ಖರ್ಚುವೆಚ್ಚಗಳನ್ನು ಭರಿಸಲು ಬಿಡುಗಡೆ ಮಾಡಲಾದ ರೂ.31,22,780/- ಗಳ ಅನುದಾನವನ್ನು ತಾಲೂಕು ಪಂಚಾಯತಿಗಳಿಗೆ ಈ ಕೂಡ ಲಗತ್ತಿಸಿದ ಅನುಬಂಧದಲ್ಲಿ ತೋರಿಸಿದಂತೆ ಬಿಡುಗಡೆ ಮಾಡಲು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಆದೇಶಿಸಲು ಈ ಕೆಳಕಂಡ ಆದೇಶ.

ಕ್ರಸಂ:ಜಿಪ/ಅಭಿವೃದ್ಧಿ/ಕುನಿ/ವಿವ-14/2011-12 ಬೆಳಗಾವಿ,ದಿನಾಂಕ:14 -1-2015.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಎಲ್ಲಅಂಶಗಳನ್ನು ಗಣನೆಗೆ ತೆಗೆದುಕೊಂಡು ಅಬ್ದುಲ್ ನಜೀರಸಾಬ್, ರಾಜ್ಯ ಗ್ರಾಮೀಣ ಅಭಿವೃದ್ಧಿಸಂಸ್ಥೆ, ಮೈಸೂರು ಇವರು 104 ತಂಡಗಳಿಗೆ 4365 ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರುಗಳಿಗೆ 3 ದಿನಗಳ ತರಬೇತಿಗಾಗಿಬಿಡುಗಡೆ ಮಾಡಲಾದ ಶೇ 80 ರಷ್ಟುಅನುದಾನ ರೂ.31,22,780/- ಗಳನ್ನುಅನುಬಂಧದಲ್ಲಿಕಾಣಿಸಿದಂತೆ ಬಿಡುಗಡೆ ಮಾಡಲು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಆದೇಶಿಸಿದೆ.

ಸದರಿ ಅನುದಾನವನ್ನು ಈ ಕೆಳಕಂಡ ಷರತ್ತಿಗೊಳಪಟ್ಟುಬಿಡುಗಡೆಗೊಳಿಸಲಾಗಿದೆ.

1. ಅಬ್ದುಲ್ ನಜೀರಸಾಬ್ ರಾಜ್ಯ ಗ್ರಾಮೀಣಾಭಿವೃದ್ದಿಸಂಸ್ಥೆ, ಮೈಸೂರು ಇವರು ತಿಳಿಸಿರುವ ಸಂಖ್ಯೆಯಂತೆ ಶಿಬಿರಾರ್ಥಿಗಳನ್ನು ವಿನ್ಯಾಸಗೊಳಿಸಲಾಗಿದೆ. ವಿನ್ಯಾಸಗೊಳಿಸಿದ ಸಂಖ್ಯೆಗೆ ಅನುಗುಣವಾಗಿ ಶಿಬಿರಾರ್ಥಿಗಳು ತರಬೇತಿಗೆ ಹಾಜರಾಗಲು ಎಲ್ಲ ಅಗತ್ಯ ಕ್ರಮ ಕೈಕೊಳ್ಳುವುದು. ಅನುದಾನ ವೆಚ್ಚ ಮಾಡುವದಕ್ಕಾಗಿ ನಕಲಿ ಹಾಜರಾತಿ ತೋಡಿಸದೇ ಪಾರದರ್ಶಕ ರೀತಿಯಲ್ಲಿ ಹಾಜರಾತಿ ಮೇಲ್ವಿಚಾರಣೆ ವ್ಯವಸ್ಥೆ ಮಾಡುವುದು.

2. ತರಬೇತಿಗೆ ನಿಯೋಜಿಸಲು ವಿಫಲರಾದ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತರಬೇತಿಗೆ ನಿಯೋಜಿಸಿದ ನಂತರ ಹಾಜರಾಗದ ಶಿಬಿರಾರ್ಥಿಗಳಿಗೆ ಡಿ.ಪಿ.ಎ. ಆರ್. ಆದೇಶ ಸಂ:148/ಕೆಟಿಪಿ/2011/(ಪಿ-2)/ಬೆಂಗಳೂರು ದಿನಾಂಕ:13-9-2012ರ ಪ್ರಕಾರ ತರಬೇತಿ ಆಗುವಂತಹ ವೆಚ್ಚವನ್ನು ವಸೂಲಿ ಮಾಡುವ ಕ್ರಮ ಕೈಕೊಳ್ಳಲಾಗುವುದು.

3. ತರಬೇತಿಗೆ ಸಂಬಂಧಿಸಿದಂತೆ ಊಟೋಪಚಾರ, ಶಿಬಿರಾರ್ಥಿಗಳ ಪ್ರಯಾಣ ವೆಚ್ಚ ಸಂಪನ್ಮೂಲ ವ್ಯಕ್ತಿಗಳಿಗೆ ವಾಸ್ತವ್ಯ ಮತ್ತು ಪ್ರಯಾಣ ವೆಚ್ಚಕ್ಕೆ ಹಾಗೂ ತಜ್ಞ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ, ತರಬೇತಿ ಕಿಟ್‌ಗಾಗಿ ಅನುದಾನ ಮತ್ತು ಸಾಂಸ್ಥಿಕ ಬೆಂಬಲಕ್ಕೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಈ ಅನುದಾನವನ್ನು ಆಯಾ ಉದ್ದೇಶಗಳಿಗೆ ಮಾತ್ರ ವಿನಿಯೋಗಿಸಲು ಅಗತ್ಯ ಕ್ರಮ ಕೈಕೊಳ್ಳುವುದು. ಸದರಿ ಬಿಲ್ಲುಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಲೆಕ್ಕಾಧಿಕಾರಿಗಳು, ತಾಲೂಕ ಪಂಚಾಯತ ಇವರು ಜಂಟಿಯಾಗಿ ಸಹಿ ಮಾಡುವುದು.

4. ಊಟೋಪಚಾರಕ್ಕಾಗಿ ಬಿಡುಗಡೆ ಮಾಡಿರುವ ಅನುದಾನವನ್ನು ನಿಗದಿಪಡಿಸಿರುವ ಮೆನು ಪ್ರಕಾರವೇ ಊಟೋಪಚಾರವನ್ನು ನೀಡುವುದು. ಊಟೋಪಚಾರ ಸರಬರಾಜು ಮಾಡುವಂತಹ ವ್ಯಕ್ತಿಯನ್ನು ಗುರುತಿಸುವಾಗ ಕೆ.ಟಿ.ಪಿ.ಪಿ. ನಿಯಮಗಳನ್ನು ಮತ್ತು ಅವರು ಈ ಹಿಂದೆ ಗುಣಮಟ್ಟದ ಊಟೋಪಚಾರ ನೀಡುತ್ತಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಗುರುತಿಸುವುದು. ಹಾಗೂ ಊಟೋಪಚಾರದ ಮೆನುವನ್ನು ಕಡ್ಡಾಯವಾಗಿ ತರಬೇತಿ ಪಡೆಯುವ ಶಿಬಿರಾರ್ಥಿಗಳ ಮಾಹಿತಿಗಾಗಿ ತರಬೇತಿ ಕೊಠಡಿಯ ನೋಟಿಸ ಬೋರ್ಡಿನಲ್ಲಿ ಪ್ರದರ್ಶನ ಮಾಡುವುದು.

5. ತರಬೇತಿ ಕಿಟ್‌ಗಾಗಿ ಬಿಡುಗಡೆ ಮಾಡಿರುವ ಅನುದಾನಕ್ಕೆ ತಕ್ಕಂತೆ ಒಂದು ಫೋಲ್ಡರ್, ರೇನಾಲ್ಡ್ಸ ಪೆನ್ ಮತ್ತು 50 ಪುಟದ ರೈಟಿಂಗ್ ಪ್ಯಾಡಒದಗಿಸಬೇಕು.

6. ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸುವಾಗ ಅವರಿಗೆ ಪೂರಕವಾದಂತಹ ಜ್ಞಾನ ಮತ್ತು ತರಬೇತಿ ನೀಡಲು ಅಗತ್ಯವಾದಂತಹ ಅನುಭವ ಇರುವುದನ್ನು ಗಮನದಲ್ಲಿಟ್ಟುಕೊಂಡು ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಬೇಕು. ಹೀಗೆ ಗುರುತಿಸಿದಂತಹ ತಜ್ಞ ಸಂಪನ್ಮೂಲ ವ್ಯಕ್ತಿಗಳು ಕಡ್ಡಾಯವಾಗಿ ಹಾಜರಾಗಿ ತರಬೇತಿಯನ್ನು ನೀಡಬೇಕು. ಅಬ್ದುಲ್ ನಜೀರಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿಸಂಸ್ಥೆ, ಮೈಸೂರು ಇವರು ಈ ಹಿಂದೆ ನೀಡಿರುವ ತರಬೇತಿಯಲ್ಲಿಭಾಗವಹಿಸಿದಂತಹ ತಜ್ಞ ಸಂಪನ್ಮೂಲ ವ್ಯಕ್ತಿಗಳು ಸರಾಸರಿ ಮೂರು ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆದಿದ್ದರೆ, ಅಂತಹ ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನು ತರಬೇತಿಗೆ ತೆಗೆದುಕೊಳ್ಳಬಾರದು.

7. ತರಬೇತಿ ಕೇಂದ್ರದಲ್ಲಿಅಬ್ದುಲ್ ನಜೀರಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿಸಂಸ್ಥೆ, ಮೈಸೂರು ಇವರು ನೀಡಿರುವ ನಮೂನೆಯಲ್ಲಿಯೇ ಕಡ್ಡಾಯವಾಗಿ ಹಾಜರಾತಿಯನ್ನು ನಿರ್ವಹಿಸತಕ್ಕದ್ದು.

8. ಆಯಾ ತಾಲೂಕಿನ ನೋಡಲ್ ಅಧಿಕಾರಿಗಳು ಮೇಲಿಂದ ಮೇಲೆ ಪ್ರವಾಸ ಮಾಡಿ ಹಾಜರಾತಿಗೆ ತಕ್ಕಂತೆ ಶಿಬಿರಾರ್ಥಿಗಳು ಇರುವದನ್ನು ಖಚಿತಪಡಿಸಿಕೊಂಡು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡತಕ್ಕದ್ದು.

9. ತಾಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡಿರುವ ಅನುದಾನಕ್ಕೆ ಪ್ರತ್ಯೇಕವಾದಂತಹ ನಗದು ವಹಿಯನ್ನು ನಿರ್ವಹಿಸತಕ್ಕದ್ದು.

10. ಪ್ರತಿ ಪಾವತಿಗೆ ಪೂರಕವಾದಂತಹ ವೋಚರಗಳನ್ನು ನಿರ್ವಹಿಸತಕ್ಕದ್ದು.

11. ತರಬೇತಿಯು ಪೂರ್ಣಗೊಂಡ 15 ದಿನಗಳೊಳಗಾಗಿ ಹಣ ಬಳಕೆ ಪ್ರಮಾಣ ಪತ್ರ ಮತ್ತು ಪೂರಕ ಅನುಬಂಧಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಸಹಿ ಮಾಡಿ ಜಿಲ್ಲಾ ಪಂಚಾಯತ ಕಾರ್ಯಾಲಯಕ್ಕೆ ಮೇಲು ರುಜುವಿಗಾಗಿ ಮುಖ್ಯಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಸಲ್ಲಿಸತಕ್ಕದ್ದು.

12. ಎಲ್ಲಾ ಮೂಲ ವೋಚರಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮಬದ್ಧವಾಗಿ ನಿರ್ವಹಿಸಿ ಮುಂದೆ ಆಡಿಟ್ ಮಾಡುವಾಗ ಒಪ್ಪಿಸತಕ್ಕದ್ದು.

13. ಅಬ್ದುಲ್ ನಜೀರಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿಸಂಸ್ಥೆ, ಮೈಸೂರು ಇವರಿಂದ ಸಿದ್ಧಪಡಿಸಿದ ಆಯವ್ಯಯದಂತೆ ಬಿಡುಗಡೆಯಾಗಿರುವ ಅನುದಾನ ಪ್ರತಿಯನ್ನು ತರಬೇತಿ ಕೊಠಡಿಯಲ್ಲಿಎಲ್ಲಾ ಪ್ರಶಿಕ್ಷಣಾರ್ಥಿಗಳ ಗಮನಕ್ಕೆ ಬರುವಂತೆ ಪ್ರದರ್ಶಿಸಲುಸೂಚಿಸಿದೆ.

14. ಬಿಡುಗಡೆಯಾದ ಅನುದಾನವನ್ನು ಯಾವುದೇ ಕಾರಣಕ್ಕೂ ಬೇರೆ ಉದ್ದೇಶಕ್ಕೆ ಬಳಸಬಾರದು ಮತ್ತು ದುರುಪಯೋಗಪಡಿಸಿಕೊಳ್ಳದಂತೆ ನೋಡಿಕೊಳ್ಳತಕ್ಕದ್ದು.

(ದೀಪ ಚೋಲನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ಪ್ರತಿಯನ್ನು: ಮಹಾ ನಿರ್ದೇಶಕರು, ಅಬ್ದುಲ್ ನಜೀರಸಾಬ, ರಾಜ್ಯ ಗ್ರಾಮೀಣ ಅಭಿವೃದ್ಧಿಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು-570011 ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

ಪ್ರತಿಯನ್ನು: ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಪ್ರತಿಯನ್ನು: ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಬೆಳಗಾವಿ, ಖಾನಾಪೂರ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಅಥಣಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ ಹಾಗೂ ರಾಯಬಾಗಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಪ್ರತಿಯನ್ನು: ಜಿಲ್ಲೆಯ ಎಲ್ಲ ತಾಲೂಕಾ ನೋಡಲ್ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

2/- ಆಯಾ ತಾಲೂಕಿನ ನೋಡಲ್ ಅಧಿಕಾರಿಗಳು ಮೇಲಿಂದ ಮೇಲೆ ಪ್ರವಾಸ ಮಾಡಿ ಹಾಜರಾತಿಗೆ ತಕ್ಕಂತೆ ಶಿಬಿರಾರ್ಥಿಗಳು ಇರುವದನ್ನು ಖಚಿತಪಡಿಸಿಕೊಂಡು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡತಕ್ಕದ್ದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

Lg/Release Order VWSC Training 14-15.docx